ಸುದೀರ್ಘವಾಗಿ ಹದಿನೈದು ಗಂಟೆ ನಿದ್ದೆ ಮಾಡಿದ್ದೀಯ. ಎಳಿಸದಿದ್ದರೆ ಹಾಗೆ ಇನ್ನೆಷ್ಟು ಗಂಟೆ ಕಂಟಿನ್ಯೂ ಮಾಡುತ್ತಿದ್ದೆಯೋ' ಎಂದು ಮೆಲ್ಲಗೆ ಕೆನ್ನೆಯನ್ನು ತಟ್ಟಿದ್ದಳು. ಇಷ್ಟೊಂದು ದೀರ್ಘವಾಗಿ ನಿದ್ದೆ ಮಾಡಿದ್ದು ಅವನಿಗೆ ನೆನಪೇ ಇರಲಿಲ್ಲ. ರಾತ್ರಿಯ ಆಯಾಸ ಮಾಯವಾಗಿ ಮೈಮನಗಳು ಉಲ್ಲಾಸದಿಂದ ಹಗುರಗೊಂಡಿದ್ದವು. ಮಧ್ಯಾಹ್ನ ಊಟ ಮಾಡಿ ಅವತ್ತು ರಾತ್ರಿ ಹತ್ತು ಗಂಟೆಯವರೆಗೂ ಮೈಥಿಲಿ ಲೆವಿನ್ಸ್ ಒಡೆತನದ ಹೋಟೆಲ್, ರೆಸಾರ್ಟ್, ಕ್ಯಾಸಿನೊ, ಟ್ರಾವೆಲ್ಸ್ ಆಫೀಸ್ ಎಲ್ಲವನ್ನೂ ಸುತ್ತಿಕೊಂಡು ಮನೆಗೆ ಬಂದಿದ್ದರು. 'ತುಂಬಾ ಚೆನ್ನಾಗಿಯೇ ಸೆಟ್ಲ್ ಆಗಿದ್ದೀರಿ' ಎಂದು ಮೈಥಿಲಿಯನ್ನು ಶ್ಲಾಘಿಸಿದ್ದ ಆಸ್ಕರ್ ವೈಲ್ಡ್.

ಮೈಥಿಲಿ, 'ಇಟ್ಸ್ ಆಲ್ ಬಿಕಾಸ್ ಆಫ್ ದಿಸ್ ಮೈ ಬಿಲವ್ಡ್ ಫ್ರೆಂಡ್' ಎಂದು ತುಸು ಭಾವುಕತೆಯಿಂದಲೇ ಪೂರ್ವಿಕಾಳನ್ನು ಆಲಂಗಿಸಿಕೊಂಡಿದ್ದಳು.

'ಪೂರ್ವಿಕಾ ಒಪ್ಪದಿದ್ದಿದ್ದರೆ ನನಗೆ ಮೈಥಿಲಿ ದಕ್ಕುತ್ತಿರಲಿಲ್ಲ, ಮತ್ತು ನಾನು ಈ ಮಟ್ಟಕ್ಕೆ ಬೆಳೆಯುತ್ತಿರಲಿಲ್ಲ. ತುಂಬಾ ಟ್ಯಾಲೆಂಟೆಡ್ ಪಾರ್ಟ್ನರ್ ಕೊಟ್ಟಿದ್ದಕ್ಕೆ ಐಯ್ಯಾಮ್ ರಿಯಲಿ ಗ್ರೇಟ್‌ಫುಲ್ ಟು ಪೂರ್ವಿಕಾ' ಎಂದು ಅವನೂ ಮೈಥಿಲಿಯನ್ನು ಆಲಂಗಿಸಿಕೊಂಡಿದ್ದ. ಮಾರನೆಯ ದಿನದಿಂದ ಮೂರು ದಿನಗಳ ಕಾಲ ಲಾಸ್ ವೆಗಾಸ್ ವೀಕ್ಷಿಸಲು ತೀರ್ಮಾನಿಸಿದ್ದರು. ಅವರಿಗೆ ಲಾಸ್ ವೆಗಾಸ್ ತೋರಿಸಲು ಖುದ್ದು ಮೈಥಿಲಿಯೇ ಜೊತೆಯಾಗಿದ್ದಳು. ಹೆಲಿಕಾಪ್ಟರ್ ಮೂಲಕ ಗ್ರಾಂಡ್ ಕೆನ್ಯೋನ್ ವೀಕ್ಷಣೆ, ವಿಮಾನದಲ್ಲಿ ಕುಳಿತು ರಾತ್ರಿಯ ಆಕಾಶದಲ್ಲಿ ಲಾಸ್ ವೆಗಾಸ್ ಸುತ್ತಾಟ, ಹೈ ರೋಲರ್ ರೈಡ್, ಎಮರಾಲ್ಡ್ ಗುಹೆಗಳ ಸುತ್ತಾಟ, ಇಂಡೋರ್ ಸ್ಕೈ ಡೈವಿಂಗ್, ಫ್ರೆಮಾಂಟ್ ರಸ್ತೆಯಲ್ಲಿ ಅಲೆದಾಟ, ನಿಯೋನ್ ಮ್ಯೂಸಿಯಂ ವೀಕ್ಷಣೆ, ಹೂವರ್ ಡ್ಯಾಮ್ ವೀಕ್ಷಣೆ, ಸೀಸರ್ಸ್ ಅರಮನೆ ಭೇಟಿ, ನೈಟ್ ಡೈನಿಂಗ್ ಇನ್ನೂ... ಇನ್ನೂ...!

ಎಷ್ಟೊಂದು ಸುತ್ತಾಟ, ಎಷ್ಟೊಂದು ಸಡಗರ, ಎಷ್ಟೊಂದು ಸಂಭ್ರಮ. ಇಂಥ ಖುಷಿಯನ್ನು ಇದೇ ಮೊದಲು ಆಸ್ಕರ್ ವೈಲ್ಡ್ ಅನುಭವಿಸಿದ್ದು. ಈ ಎಲ್ಲಾ ಆಟಗಳಲ್ಲಿ, ವಿನೋದಗಳಲ್ಲಿ ಆಸ್ಕರ್ ವೈಲ್ಡಾಗಲೀ, ಪೂರ್ವಿಕಾ ದೇಶಪಾಂಡೆಯಾಗಲೀ ಹದ್ದು ಮೀರಿ ವರ್ತಿಸಿರಲಿಲ್ಲ. ಒಬ್ಬರನ್ನೊಬ್ಬರು ಪರಸ್ಪರ ಅರಿತುಕೊಳ್ಳಲು ಎಚ್ಚರಿಕೆಯಿಂದ ವರ್ತಿಸುತ್ತಿದ್ದರು. ಊಟದ ವಿಷಯದಲ್ಲೂ ಅಷ್ಟೆ, ಪಾನೀಯಗಳ ವಿಷಯದಲ್ಲೂ ಅಷ್ಟೆ. ಅವರವರಿಗೆ ಇಷ್ಟವಾದದ್ದನ್ನು ಕುಡಿಯುತ್ತಿದ್ದರು, ಇಷ್ಟವಾದದ್ದನ್ನು ತಿನ್ನುತ್ತಿದ್ದರು. ಒಬ್ಬರಿಗೊಬ್ಬರು ಯಾವ ವಿಷಯದಲ್ಲೂ ಯಾರೊಬ್ಬರನ್ನೂ ಬಲವಂತಪಡಿಸುತ್ತಿರಲಿಲ್ಲ. ಮುಂಬಯಿಗೆ ತೆರಳಲು ಇನ್ನು ಮೂರು ದಿನ ಉಳಿದಿತ್ತು. ಅಂದು ರಾತ್ರಿ ಲೆವಿನ್ಸ್ ತನ್ನ ರಾಯಲ್ ಪ್ಯಾರಡೈಸ್ ರೆಸಾರ್ಟ್‌ನಲ್ಲಿ ಕಾಕ್‌ಟೇಲ್ ಪಾರ್ಟಿಯನ್ನು ಆಯೋಜಿಸಿದ್ದ. ಕಾಮನಬಿಲ್ಲನ್ನು ಮೀರಿಸುವಂತಿದ್ದ ಬಣ್ಣಗಳಿಂದ ಅಲಂಕೃತಗೊಂಡ ಪಾರ್ಟಿ ಹಾಲ್, ಮತ್ತು ಬರಿಸುವಂತೆ ಹಾಡುತ್ತಿದ್ದ ನೃತ್ಯಗಾತಿಯರು. ಲೆವಿನ್ಸ್, ಮೈಥಿಲಿಯ ಬಲವಂತದಿಂದ ಆಸ್ಕರ್ ವೈಲ್ಡ್, ಪೂರ್ವಿಕಾ ಇಬ್ಬರೂ ಲಾಸ್ ವೆಗಾಸ್ ಸ್ಪೆಷಲ್ ಕಾಕ್‌ಟೇಲ್ ಕುಡಿದಿದ್ದರು. ಇದುವರೆಗೂ ವೈನ್, ಬಿಯರ್ ಮಾತ್ರ ಕುಡಿದಿದ್ದ ವೈಲ್ಡನಿಗೆ ಕಾಕ್‌ಟೇಲ್ ಅಪರೂಪದ ಅಪೂರ್ವ ರುಚಿಯನ್ನು ಕೊಟ್ಟಿತ್ತು. ವಿವಿಧ ಬಗೆಯ ಸಮುದ್ರ ಮೀನಿನ ಕರಿದ ಭಕ್ಷ್ಯಗಳನ್ನು ತಿನ್ನುತ್ತಾ ಕಾಕ್‌ಟೇಲನ್ನು ಪೆಗ್ ಮೇಲೆ ಪೆಗ್ ಕುಡಿಯತೊಡಗಿದ್ದ. ಮೈಥಿಲಿ, ಪೂರ್ವಿಕಾ, ಲೆವಿನ್ಸ್ ಕೂಡ ಉಲ್ಲಾಸದಿಂದ ಕಾಕ್‌ಟೇಲ್ ಕುಡಿಯುತ್ತಿದ್ದರು. ಕಾಕ್‌ಟೇಲ್ ಕುಡಿಯುತ್ತಾ ಕುಡಿಯುತ್ತಾ ಆಸ್ಕರ್ ವೈಲ್ಡ್ ಎದ್ದು ನಿಂತು ತಾನೂ ನರ್ತಕಿಯರೊಂದಿಗೆ ನರ್ತಿಸತೊಡಗಿದ್ದ! ಓಹ್, ಅವನ ಡ್ಯಾನ್ಸ್ ಅದ್ಭುತವಾಗಿತ್ತು. ಚಪ್ಪಾಳೆಗಳ ಸುರಿಮಳೆಯೊಂದಿಗೆ ಸಂಗೀತದ ಅಬ್ಬರವೂ ಹೆಚ್ಚಾಗತೊಡಗಿತ್ತು. ಆಸ್ಕರ್ ವೈಲ್ಡನೊಂದಿಗೆ ಅಲ್ಲಿ ನೆರೆದಿದ್ದ ಗಂಡಸರು, ಹೆಂಗಸರು, ಮಕ್ಕಳು, ವಯಸ್ಸಾದವರು ಕೂಡ ನರ್ತಿಸಲು ಪ್ರಾರಂಭಿಸಿದ್ದರು. ಪೂರ್ವಿಕಾ, ಮೈಥಿಲಿ, ಲೆವಿನ್ಸ್ ಅವನ ಸುತ್ತಲೂ ನರ್ತಿಸುತ್ತಾ ಅವನನ್ನು ಪ್ರೋತ್ಸಾಹಿಸುತ್ತಿದ್ದರು.

ಹೌದು, ಅವನೊಂದಿಗೆ ಇಡೀ ಜಗತ್ತೇ ಕುಣಿಯುತ್ತಿರುವಂತೆ! ಕುಣಿಯುತ್ತಾ, ಕುಣಿಯುತ್ತಾ ವೈಲ್ಡನಿಗೆ ದಣಿವು ಆವರಿಸುತ್ತದೆ. ಹೆಜ್ಜೆಗಳು ಬ್ಯಾಲೆನ್ಸ್ ತಪ್ಪುತ್ತಿವೆ. ಇನ್ನೇನು ಅವನು ಬೀಳಬೇಕು, ಯಾರೋ ಬಂದು ಅವನನ್ನು ತಬ್ಬಿ ಹಿಡಿಯುತ್ತಾರೆ. ಮೃದುವಾದ, ಹಿತವಾದ ಹಿಡಿತ. ಹಾಗೆಯೇ ಅವನನ್ನು ಹಿಡಿದು ಮೆತ್ತನೆಯ ಹಾಸಿಗೆಯ ಮೇಲೆ ಮಲಗಿಸುತ್ತಾರೆ. ಆಸ್ಕರ್ ವೈಲ್ಡ್ ಮಂಪರಿನ ಮತ್ತಿನಲ್ಲಿ ಮಲಗಿಸಿದವರನ್ನೇ ಬಲವಾಗಿ ತಬ್ಬಿ ಹಾಸಿಗೆಯ ಮೇಲೆ ಉರುಳಿಸುತ್ತಾನೆ. ಘಮಘಮಿಸುತ್ತಿರುವ ನವಿರಾದ ಸುಕೋಮಲ ದೇಹ! ಅವನ ದೇಹದಲ್ಲಿ ಅಪರಿಮಿತ ಬಯಕೆಗಳು ಚಿಗುರೊಡೆದು ಉದ್ದೀಪನಗೊಂಡಂತೆ. ದೇಹದ ನರನಾಡಿಗಳು ಲೌಕಿಕ ಮತ್ತು ಅಲೌಕಿಕ ಎರಡೂ ಲೋಕದೊಳಗೆ ಬೇರುಬಿಟ್ಟಂತೆ. ಅವನು ಊರ್ಮಿಳಾ, ಅಂಜಲಿ ದೇಸಾಯಿ, ಸಾಯಿಪ್ರಭೆ, ಪೂರ್ವಿಕಾ ದೇಶಪಾಂಡೆ, ಮೈಥಿಲಿ ಎಲ್ಲರೊಂದಿಗೂ ಅಣು ಅಣುವಾಗಿ ಬೆರೆತುಹೋದಂತೆ. ಎಲ್ಲರೂ ತನ್ನನ್ನು...

'ಹೇ ಸೋನಾ ಇಲ್ಲಿ ಬಾ, ನಾನೇ ನಿನ್ನ ಹೃದಯ...'

'ಹೇ ಆಸ್ಕರ್ ನನ್ನ ಕಡೆ ಬಾ, ನಿನಗೆ ಪ್ರೀತಿಯೆಂದರೆ ಏನೆಂಬುದನ್ನು ತೋರಿಸುತ್ತೇನೆ...'

'ಹೇ ಆಸ್ಕರ್ ವೈಲ್ಡ್ ನಾನೇ ನಿನ್ನ ನೈಟಿಂಗೇಲ್, ನನ್ನ ಬಳಿ ಬಾ — ನಿನ್ನ ಕೊನೆಯುಸಿರಿರುವವರೆಗೂ ಹಾಡುತ್ತಲೇ ಇರುತ್ತೇನೆ...' ಮುಂತಾಗಿ ಕೂಗಿ ಕರೆಯುತ್ತಿರುವಂತೆ...

'ಸೋನಾ ನಿಜಕ್ಕೂ ಸ್ವರ್ಗದಲ್ಲಿ ತೇಲಾಡುತ್ತಿದ್ದಾನೆ. ಈ ಸ್ಥಿತಿಯಲ್ಲಿ ಅವನನ್ನು ನೋಡುತ್ತಿರುವುದಕ್ಕೆ ನನಗೆ ತುಂಬಾ ಖುಷಿಯಾಗುತ್ತಿದೆ. ಬರಿ ಶ್ರೀಮಂತಿಕೆಯೊಂದೇ ನಿಜವಾದ ಸಂಪತ್ತಲ್ಲ. ನಿಜವಾದ ಸಂಪತ್ತೆಂದರೆ ಶ್ರೀಮಂತಿಕೆಯಿಂದ ಹೇಗೆ ಸುಖದಲ್ಲಿ ಮುಳುಗುವುದೆಂಬುದನ್ನು ಕಲಿಯುವುದು. ಸುಖ ದೊರೆತ ಕ್ಷಣವೇ ಅತೃಪ್ತಿ ಇಣುಕಿಬಿಡುತ್ತದೆ. ಮತ್ತೆ ಅಂಥ ಅತೃಪ್ತಿಯನ್ನು ಸೋಲಿಸಿ ಸುಖವನ್ನು ಗೆಲ್ಲಬೇಕು. ದಟ್ಸ್ ದಿ ರಿಯಲ್ ಚಾಲೆಂಜ್ ಆಫ್ ಎನಿಬಡೀಸ್ ಲೈಫ್...' ಪೂರ್ವಿಕಾಳ ಬಾಯಿಯಿಂದ ಎಂಥ ತರ್ಕಬದ್ಧವಾದ ಮಾತುಗಳು ಕೇಳಿ ಬರುತ್ತಿವೆ!

'ಸೋನಾನನ್ನು ಸುಖದ ಸ್ವರ್ಗಕ್ಕೆ ಇಳಿಯುವಂತೆ ಮತ್ತು ಅವನೊಂದಿಗೆ ನಾವೂ ಸುಖದ ಸ್ವರ್ಗದಲ್ಲಿ ಇಳಿಯಲು ಪ್ಲಾನ್ ಮಾಡಿದ್ದು ನಾನೇ. ನಮ್ಮ ಕಾಕ್‌ಟೇಲ್ ಡ್ರಿಂಕ್ಸ್‌ಗೆ ಸ್ವಲ್ಪ ಬಾಂಗ್ ಮತ್ತು ಸಿಲ್ಡೆನಾಫಿಲ್ ಸಿಟ್ರೇಟ್ ಸೇರಿಸಿದ್ದೆ. ಆರು ತಿಂಗಳ ಹಿಂದೆ ಇಂಥ ಕಾಂಬಿನೇಷನ್ ಕಾಕ್‌ಟೇಲ್ ಅನ್ನು ಜೇಮ್ಸ್ ಬಾಂಡ್ ಡೇನಿಯಲ್ ಕ್ರೇಗ್‌ಗೆ ಗೊತ್ತಾಗದ ಹಾಗೆ ಕೊಟ್ಟಿದ್ದೆ. ಅಂದು ರಾತ್ರಿ ಪೂರ್ತಿ ಅವನು ಸಂಗಾತಿ ರಾಚೆಲ್ ವೈಜಳ ನಿದ್ದೆಯನ್ನು ಕೆಡಿಸಿದ್ದನಂತೆ. ಬೆಳಿಗ್ಗೆ ರಾಚೆಲ್ ನಗುತ್ತಾ 'ವ್ಹಾಟ್ ಎ ಮೆಮೊರಬಲ್ ನೈಟ್ ಯು ಗಿಫ್ಟೆಡ್ ಮಿ ವಿಥ್ ಯುವರ್ ಕಾಕ್‌ಟೇಲ್ ಪಾರ್ಟಿ, ಥ್ಯಾಂಕ್ಯೂ ವೆರಿಮಚ್' ಎಂದು ನನಗೆ ಅಭಿನಂದನೆಗಳನ್ನು ಹೇಳಿದ್ದಳು. ಈ ಎಕ್ಸ್‌ಪೆರಿಮೆಂಟನ್ನು ಮೂರ್ನಾಲ್ಕು ಸಾರಿ ಲೆವಿನ್ಸ್ ಮೇಲೂ ಮಾಡಿದ್ದೆ. ಸೋನಾ ಐದಾರು ಪೆಗ್ ಕುಡಿದುಬಿಟ್ಟ...' ಮೈಥಿಲಿ ನಕ್ಕು ನಕ್ಕು ನೀರಾಗಿದ್ದಳು.

'ವ್ಹಾಟ್ ಎ ಕಾಂಬಿನೇಷನ್. ಸ್ಪಿರಿಟ್ ಜೊತೆ ಬಾಂಗ್ ಬೆರೆಸೋದೇನೋ ಕಾಮನ್, ಆದರೆ ಇವುಗಳ ಜೊತೆ ಸಿಲ್ಡೆನಾಫಿಲ್ ಸಿಟ್ರೇಟ್ ಬೆರೆಸೋದು ಸ್ವಲ್ಪ ರಿಸ್ಕ್ ಫ್ಯಾಕ್ಟರ್. ಆದರೂ ಅವುಗಳನ್ನೆಲ್ಲ ಒಂದು ರೊಮ್ಯಾಂಟಿಕ್ ಅಂಡ್ ರಿಸೋರ್ಸ್‌ಫುಲ್ ಪಾಯಿಂಟ್‌ನಲ್ಲಿ ಬ್ಲೆಂಡ್ ಮಾಡೋದಿದೆಯಲ್ಲ, ಅದೇನೂ ಸುಲಭದ ಕೆಲಸವಲ್ಲ. ನಿಜಕ್ಕೂ ನಿನಗೆ ಕೆಮಿಸ್ಟ್ರಿಯಲ್ಲಿ ಡಾಕ್ಟರೇಟ್ ಕೊಡಬೇಕು' ಎಂದು ಪೂರ್ವಿಕಾಳೂ ನಕ್ಕು ನಕ್ಕು ನೀರಾಗಿದ್ದಳು. ಇವರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಸುಖದಲ್ಲಿ ತೇಲುತ್ತಾ, ಮುಳುಗುತ್ತಾ ಕಡೆಗೆ ಆಸ್ಕರ್ ವೈಲ್ಡ್ ಮಂಪರಿನಲ್ಲಿ ತೇಲಿ ನಿದ್ದೆಯಲ್ಲಿ ಮುಳುಗಿಬಿಟ್ಟ. ಎಚ್ಚರವಾದಾಗ ವೈಲ್ಡನಿಗೆ ದೇಹ ಮತ್ತು ಮನಸ್ಸಿನ ಭಾರವೆಲ್ಲ ಖಾಲಿ ಖಾಲಿಯಾಗಿ ಹಗುರವಾಗಿರುವಂತೆ ಭಾಸವಾಗಿತ್ತು. ಕಣ್ಣು ತೆರೆದವನಿಗೆ ತನ್ನನ್ನು ತಬ್ಬಿಕೊಂಡು ಮೈಥಿಲಿ ಬೆತ್ತಲೆಯಾಗಿ ಮಲಗಿರುವುದು ಕಂಡು ಗಾಬರಿಯಿಂದ ಎದ್ದು ಕುಳಿತ. ಅರೆ, ಅವನೂ ಬೆತ್ತಲೆಯಾಗಿದ್ದ. ಪಕ್ಕದ ಮಂಚದ ಮೇಲೆ ಪೂರ್ವಿಕಾ ಮತ್ತು ಲೆವಿನ್ಸ್‌ರ ಬೆತ್ತಲೆ ದೇಹಗಳು ಒಂದನ್ನೊಂದು ತೆಕ್ಕೆಹಾಕಿಕೊಂಡು ಬಿದ್ದಿವೆ. ರಾತ್ರಿಯ ಹಿತವಾದ ನರಳಾಟಗಳ ಸತ್ಯ ಅರಿವಿಗೆ ಬಂದು ಸಣ್ಣಗೆ ನಡುಗಿದ್ದ. ಆದರೂ ರಾತ್ರಿ ದಕ್ಕಿದ ಸ್ವರ್ಗ ಸುಖದ ನೆನಪುಗಳನ್ನು ಹೆಕ್ಕಲು ಮನಸ್ಸು ಏಕೋ ವಿಪರೀತವಾಗಿ ಬಯಸುತ್ತಿತ್ತು. ಸಮಯ ಬೆಳಿಗ್ಗೆ ಒಂಬತ್ತು ಗಂಟೆಯಾಗಿತ್ತು. ಇನ್ನಷ್ಟು ರಿಲ್ಯಾಕ್ಸ್ ಆಗಲು ಅವನು ಮೈಥಿಲಿಯ ಕೆನ್ನೆಯ ಮೇಲೆ ಬೆರಳಾಡಿಸಲು ಪ್ರಾರಂಭಿಸಿದ!

(ಸಶೇಷ)